ಮೊನ್ನೆಯಿಂದ ಹುಚ್ಚುಗಟ್ಟಿ ಮಳೆ ಸುರಿಯುತ್ತಲೇ ಇದೆ. ದಿನವಿಡೀ ಬೇಸಗೆಯಲ್ಲಿ ನೀರಿಲ್ಲ ನೀರಿಲ್ಲ ಅಂತ ಹಲುಬಿದ್ದಕ್ಕೋ ಏನೋ, ಸೂರಿನಡಿಯಲ್ಲಿ ಸುಮ್ಮಗೆ ಏಕಪ್ರಕಾರವಾಗಿ ಧಾರಾಕಾರ ಸುರಿಯುತ್ತಲೇ ಇದೆ. ಮಾಡಿನಡಿಯಲ್ಲಿ ಲಯಬದ್ಧವಾಗಿ ಬೀಳುವ ಮಳೆಯ ಸೊಬಗನ್ನು ನೋಡುತ್ತಲೇ ಮನಸ್ಸು ತಾನೇ ತಾನಾಗಿ ಹಿಂದಕ್ಕೆ ಜಾರಿಕೊಳ್ಳುತ್ತವೆ. ಹಳತನ್ನೆಲ್ಲಾ ಮಳೆ ನಾಜೂಕಾಗಿ ತಂದು ಪಡಸಾಲೆಯಲ್ಲಿ ಹರವಿಡುತ್ತಿದೆ.

ಹೀಗೆ ಜಿಟಿಗುಟ್ಟಿ ಮಳೆ ಸುರಿಯುವಾಗ ನನ್ನಜ್ಜಿ ಮನೆಯ ಹಿಂದೆ ದೊಡ್ಡ ಟಯರ್ ಇಟ್ಟು ಅದರ ಮೇಲೆ ದೊಡ್ಡ ತಾಮ್ರದ ಹಂಡೆಯನ್ನು ಉಜ್ಜಿ ಹೊಳಪು ಮಾಡಿ ತಂದಿಡುತ್ತಿದ್ದಳು. ಮಾಡಿನ ನೀರು ಸರಾಗವಾಗಿ ಬಿದ್ದು ಹಂಡೆ ತುಂಬಲಿಕ್ಕೆ ಒಂದು ಬಾಳೆಯ ದಿಂಡನ್ನು ಕೊರೆದು ದಂಬೆ ಮಾಡಿ ಇಡುತ್ತಿದ್ದಳು. ಅಕ್ಷಯ ನಿಧಿಯಂತೆ ಬರಿದು ಮಾಡಿದಷ್ಟು ದೇವಲೋಕದ ಧಾರೆ ಹಂಡೆಯನ್ನು ನಿರಂತರ ತುಂಬಿಸುತ್ತಿತ್ತು. ಮನ ಬಂದಂತೆ ತಿಕ್ಕಿದ್ದು, ತೊಳೆದದ್ದು, ಚೆಲ್ಲಿದ್ದು, ನೀರು ಪೋಲು ಮಾಡಿದ್ದೇ ಮಾಡಿದ್ದು. ಆ ಮಳೆಗಾಲವಿಡೀ ನಮಗೆ ಹೊಳೆಯಿಂದ ನೀರು ಕೊಡಪಾನದಲ್ಲಿ ತುಂಬಿ ತಲೆಯ ಮೇಲೊಂದು, ಸೊಂಟದ ಮೇಲೊಂದು ಇಟ್ಟು ಏದುಸಿರು ಬಿಡುತ್ತಾ ಹೊರುವ ಶಿಕ್ಷೆಯಿಂದ ಮುಕ್ತಿ.

ಒಂದಷ್ಟು ವರುಷಗಳ ಹಿಂದಕ್ಕೆ ಹೋದರೆ, ಯಾರ ಮನೆಯಲ್ಲೂ ನಲ್ಲಿಯ ವ್ಯವಸ್ಥೆ ಇರುತ್ತಿರಲಿಲ್ಲ. ಇದ್ದರೂ ಅಂಗಳದ ಒಂದು ಮೂಲೆಯಲ್ಲಿ ಇರುತ್ತಿತ್ತು. ಅಲ್ಲಿಗೆ ಹೋಗಿ ಬಿಂದಿಗೆ ಹಿಡಿದು, ಮನೆಗೆ, ಬಚ್ಚಲಿಗೆ ಬೇಕಾದಷ್ಟು ನೀರನ್ನು ತುಂಬಿಸಿಕೊಳ್ಳಬೇಕಿತ್ತು. ದಿನ ನಿತ್ಯ ಮಾಡಲೇಬೇಕಾದ ಅನಿವಾರ್ಯ ಕೆಲಸಗಳಲ್ಲಿ ನೀರು ಹೊತ್ತು ತರುವ ಕೆಲಸವೂ ಒಂದು. ಅದು ತುಂಬಾ ಮುಖ್ಯವಾದ ಕೆಲಸವಾದ ಕಾರಣ ನೀರನ್ನು ತುಂಬಾ ಜಾಗರೂಕತೆಯಿಂದ ಉಪಯೋಗಿಸಬೇಕಿತ್ತು.

ನಮ್ಮದು ಬಂಟ ಮಲೆಯೆಂಬ ದಟ್ಟ ಹಸಿರು ಕಾನನದ ನಡುವೆ ಇರುವಂತಹ ಊರು. ಅಲ್ಲಿ ನೀರಿಗೆ ಯಾವೊತ್ತು ಬರಗಾಲ ಬಂದಿದ್ದೇ ಇಲ್ಲ. ಹಾಗಂತ ಮನೆಯ ಅಕ್ಕಪಕ್ಕ ಕೆರೆ, ಬಾವಿ, ನದಿ ಯಾವುದೂ ಇಲ್ಲ. ಕಾಡಿನ ಕಾಣದ ಯಾವುದೋ ಎಡೆಯಿಂದ, ಬೆಟ್ಟದ ಬುಡದಿಂದ ಸೀಳಿಕೊಂಡು ಸಣ್ಣ ಒರತೆಯ ಸೆಲೆಯೊಂದು ಸೀದಾ ನಮ್ಮ ಮನೆಯ ಅಂಗಳದವರೆಗೂ ಬಂದು ಬೀಳುತ್ತಿತ್ತು. ಆ ನೀರು ಬರುವ ಜಾಗ ನೋಡಿದರೆ ನಿಜಕ್ಕೂ ಅಚ್ಚರಿ ಹುಟ್ಟಿಸುತ್ತದೆ. ಒಂದು ಕೈ ಬೆರಳು ಮುಳುಗುವಷ್ಟು ಆಳವೂ ಇಲ್ಲದ ನೀರು, ಹಾಗೇ ಸರಾಗವಾಗಿ ತನ್ನ ಪಾಡಿಗೆ ಹರಿಯುತ್ತಾ ನಮ್ಮನ್ನೆಲ್ಲಾ ವರ್ಷವಿಡೀ ಬಿಡದೇ ಪೊರೆಯುತ್ತಿತ್ತು. ನಮ್ಮದು ಅಡಿಕೆ ಕೃಷಿ, ಹಾಗಾಗಿ ಅಡಿಕೆ ಮರದ ತಟ್ಟೆ ಬೇಕಾದಷ್ಟು ಸಿಗುವ ಕಾರಣ, ಅದರಿಂದ ದಂಬೆ ತಯಾರಿಸಿ, ಅಂಗಳಕ್ಕೆ ಕಲ್ಲು ಹಾಸಿ, ದಿನದ ಇಪ್ಪತ್ತನಾಲ್ಕು ಗಂಟೆಯೂ ಅದರ ಮೂಲಕ ನೀರು ಬೀಳುವಂತೆ ಮಾಡುತ್ತಿದ್ದರು. ನಾವು ಅದನ್ನು 'ಅಬ್ಬಿ ಜಾಲು' ಅಂತಾನೇ ಕರೆಯುತ್ತಿದ್ದದ್ದು. ನಾವು ಮಕ್ಕಳೆಲ್ಲಾ ದಂಬೆಯ ಅಬ್ಬಿಯ ನೀರಿಗೆ ತಲೆಯಿಟ್ಟು ತೋಯಿಸಿಕೊಳ್ಳುತ್ತಲೇ ಬಾಲ್ಯ ಕಳೆದು ಹರೆಯಕ್ಕೆ ಕಾಲಿಟ್ಟದ್ದು.

ದೂರದ ಕಾಡಂಚಿನಿಂದ ತೋರು ಬೆರಳು ನೀರು ಯಾವುದೋ ಮಾಯಕದಂತೆ ನಮ್ಮ ಅಂಗಳದವರೆಗೂ ಬಂದು ಬೀಳುತ್ತಿದ್ದ ಕಾರಣ ನಮಗೆ ನೀರಿನ ಸಮಸ್ಯೆಯೊಂದು ಕಾಡಲೇ ಇಲ್ಲ. ಆದರೆ ಮಲೆನಾಡಿನ ನನ್ನಜ್ಜಿ ಮನೆಯಲ್ಲಿ ನೀರಿಗೆ ಸಮಸ್ಯೆ ಇರದಿದ್ದರೂ ಜಲತಾಣಗಳಾದ ಬಾವಿ, ಹೊಳೆ, ಎಲ್ಲವೂ ಮಾರುದೂರದಲ್ಲಿ. ಎಲ್ಲಿ ನದಿ, ಹಳ್ಳ ಇರುತ್ತಿತ್ತೋ ಅಂತಹ ಜಾಗದಲ್ಲಿ ಅವರೆಲ್ಲಾ ಗದ್ದೆ ಬೇಸಾಯ ಮಾಡುತ್ತಿದ್ದರು. ಎಲ್ಲೋ ದೂರದಲ್ಲಿ ಮನೆ ಇರುತ್ತಿತ್ತು. ಹಾಗಾಗಿ ಬೆಟ್ಟ ಹತ್ತಿ ಇಳಿದು ಮನೆಗೆ ನೀರು ತಂದು ತುಂಬಿಸುವುದೆಂದರೆ ಹರ ಸಾಹಸವೇ. ಮಕ್ಕಳೆಲ್ಲಾ ಶಾಲೆ ಬಿಟ್ಟಾಕ್ಷಣ ಮೈಲು ದೂರ ನಡೆದುಕೊಂಡು ಬಂದೆವೆಂದು ಆಯಾಸ ಪರಿಹರಿಸಿಕೊಳ್ಳುವಂತಿಲ್ಲ. ಮೊದಲು ಕತ್ತಲಾಗುವುದಕ್ಕೆ ಮುಂಚೆ ಮನೆಯ ಪಾತ್ರೆ ಪಗಡಿಗಳಿಗೆ ನೀರು ತುಂಬಿಸಿದರಷ್ಟೆ ಆಯಾಸ ಪರಿಹಾರವಾಗುವುದು.

ಬೇಸಿಗೆಯ ಕಾಲದಲ್ಲಂತೂ ದೂರದ ಹೊಳೆಯ ಬದಿಯಲ್ಲಿಯೇ 'ಗುಡ್ಡ' ಅನ್ನುವ ತಾತ್ಕಾಲಿಕ ಸ್ನಾನಗೃಹ ತೆಂಗಿನ ಮಡಲಿನ ಗರಿಯಿಂದಲೋ ಅಥವಾ ಮುಡಂಗಿ ಗಿಡದ ಎಲೆಯಿಂದ ಸಿದ್ಧಗೊಳ್ಳುತ್ತಿತ್ತು. ಅಲ್ಲೇ ಒಲೆ ಹೂಡಿ, ಹಂಡೆ ಇಟ್ಟು, ಸುಲಭಕ್ಕೆ ಹೊಳೆಯಿಂದ ನೀರು ತಂದು ತುಂಬಿಸಿ ಸ್ನಾನ ಮಾಡುವುದೇ ಒಂದು ಸಂಭ್ರಮ. ಹಳ್ಳಿಯ ಎಲ್ಲ ಮನೆಗಳಲ್ಲಿ ಇದೇ ವಾಡಿಕೆ. ಹಾಗಾಗಿ ಮಳೆಗಾಲ ಬಂದರೆ ಮಾತ್ರ ಎಲ್ಲಾ ಕೆಲಸವೂ ನಿರಾಯಾಸವಾಗಿ ಸಾಗಿ ಬಿಡುತ್ತಿತ್ತು. ನೀರಿನ ವ್ಯವಸ್ಥೆ ಸಮರ್ಪಕವಾಗಿ ಇದ್ದರಷ್ಟೇ ಎಲ್ಲಾ ಕೆಲಸಗಳು ಸುಸೂತ್ರವಾಗಿ ನಡೆಯುತ್ತದೆ ಎಂಬುದು ಎಲ್ಲಾ ಕಾಲಕ್ಕೂ ಅನ್ವಯವಾಗುವಂತಹ ಸಾರ್ವತ್ರಿಕ ಸತ್ಯ. ಇನ್ನು ಮತ್ತೊಂದು ವಿಶೇಷವೆಂದರೆ, ಒಳ್ಳೆ ಮಳೆ ಹೊಡೀತು ಅಂದರೆ ಮನೆಯ ಸುತ್ತಮುತ್ತಲೆಲ್ಲಾ ಒರತೆ ನೀರು ತನ್ನಷ್ಟಕ್ಕೇ ಹುಟ್ಟಿಕೊಂಡು ಬಿಡುತ್ತಿತ್ತು. ಅಂಗಳದ ಎಲ್ಲ ಬದಿಗಳಲ್ಲಿ ನೀರಿನ ಸೆಲೆಗಳು ಸುಳಿ ಸುಳಿಯಾಗಿ ಹರಿಯುತ್ತಾ ಸಣ್ಣ ತೊರೆಯಾಗುವ ಹಂಬಲ ಹೊತ್ತು ಸಾಗುವಂತೆ ಭಾwಸವಾಗುತ್ತಿತ್ತು. ನೀರಿನ ಒರತೆ ಹುಟ್ಟಿದ ಆಧಾರದ ಮೇಲೆ ಹಿಂದಿನ ವರುಷಗಳ ಮಳೆಯ ಲೆಕ್ಕಾಚಾರ ಮಾಡುತ್ತಿದ್ದರು. ಮನೆಯ ಸುತ್ತಮುತ್ತ ಪಾಚಿಗಟ್ಟಿ, ಮಳೆಗಾಲದ ನಡಿಗೆಗೂ ಒಂದು ಕಲೆ ಒದಗಿ ಬರುತ್ತಿತ್ತು. ನಡಿಗೆಯಲ್ಲಿ ಅಷ್ಟೇ ನಯ ನಾಜೂಕು ಬೇಕಾಗುತ್ತದೆ. ಅಷ್ಟೆಲ್ಲಾ ಎಚ್ಚರಿಕೆ ಮೀರಿಯೂ ಜಾರುವುದು ಏಳುವುದು ಇಲ್ಲದಿದ್ದರೆ ಮಳೆ ಬಂದು ಹೋದದ್ದಕ್ಕೆ ಅರ್ಥವೇನಿದೆ? ಆದರೆ ಈ ಸಣ್ಣ ಪುಟ್ಟ ಜಾರುವಿಕೆ ಗಂಭೀರವಾಗದಂತೆ ಮಳೆ ಮತ್ತಷ್ಟು ಜಾಗರೂಕ ಮನಸ್ಥಿತಿಯನ್ನು ಕರುಣಿಸುತ್ತಿತ್ತು. ಮಳೆಯ ಈ ಸಣ್ಣ ಪುಟ್ಟ ಸಂಗತಿಗಳೆಲ್ಲಾ ಬದುಕಿಗೆ ಎಷ್ಟೆಲ್ಲಾ ಎಚ್ಚರಿಕೆಯ ಪಾಠವನ್ನು ಕಲಿಸಿ ಹೋಗುತ್ತದೆಯಲ್ಲ ಅಂತ ಈಗ ಭಾಸವಾಗುತ್ತಿದೆ.

ಇನ್ನೂ ಜೋರಾಗಿ ಮಳೆ ಬಂತೆಂದರೆ ಶಾಲೆಗೆ ರಜೆಯಂತೂ ಮಂಜೂರಾಗುತ್ತಿತ್ತು. ಆದರೆ ಅದು ಗೊತ್ತಾಗುವುದೆಂತು? ಆ ಮಳೆಯಲ್ಲಿಯೇ ಶಾಲೆಗೆ ಹೋಗಬೇಕಿತ್ತು. ದೂರವಾಣಿ ಸೌಕರ್ಯಗಳು ತೀರಾ ವಿರಳವಾಗಿದ್ದಂತಹ ಆ ಕಾಲ, ಇದ್ದರೂ ಅವಕ್ಕೂ ಶೀತ ಜ್ವರ ತಾಗಿ ಹಾಗೇ

